# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯನ್ನು 2018-19ನೇ ಸಾಲಿನಿಂದ ಜಾರಿಗೆ ತರಲು ನೀಡಿರುವ ಆಡಳಿತಾತ್ಮಕ ಮಂಜೂರಾತಿಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/67/ಮೀಇಯೋ/2017, ದಿನಾಂಕ: 10-05-2017.

(2) ಪತ್ರ ಸಂಖ್ಯೆ: ಮೀನಿ/163/ಪಂವಾಯೋ(1)/2016, ದಿನಾಂಕ: 28-07-2018.

******

## ಪ್ರಸ್ತಾವನೆ:

ರಾಜ್ಯ ಸರ್ಕಾರವು 2017-18 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-63 ರಲ್ಲಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ರಾಜ್ಯಾದ್ಯಂತ ಇರುವ ಪ್ರಮುಖ ಕೆರೆಗಳಲ್ಲಿ 2,500 ಹೆಕ್ಟೇರ್ ಪ್ರದೇಶದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನುಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಟ 27,000 ರೂ.ಗಳನ್ನು ನೀಡಲು ಪ್ರಸ್ತಾಪಿಸಿದೆ. ಇದಕ್ಕಾಗಿ 6.75 ಕೋಟಿ ರೂ.ಗಳನ್ನು ನೀಡಲಾಗುವುದು" ಎಂದು ಘೋಷಿಸಲಾಗಿದೆ.

1KAK
ಸರ್ಕಾರ ಮೀನುಗಾರಿಕೆ
23 NOV 2018

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, 2017-18ನೇ ಸಾಲಿನಲ್ಲಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ರಾಜ್ಯಾದ್ಯಂತ ಇರುವ ಪ್ರಮುಖ ಕೆರೆಗಳಲ್ಲಿ 2,500 ಹೆಕ್ಟೇರ್ ಪ್ರದೇಶದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನುಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಟ 27,000 ರೂ.ಗಳನ್ನು ನೀಡಿ, ಅರೆ ತೀವ್ರ ಮೀನು ಕೃಷಿ ಮಾಡುವವರಿಗೆ ಅನುಕೂಲವಾಗುವ ದೃಷ್ಟಿಯಿಂದ, ಹೊಸ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಅಗತ್ಯವಿರುವ ರೂ.675.00 ಲಕ್ಷಗಳನ್ನು ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯ ಲೆಕ್ಕ ಶೀರ್ಷಿಕೆ 2405-00-101-0-03 ರಡಿಯಲ್ಲಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ಸದರಿ ಯೋಜನೆಯಡಿ 2017-18ನೇ ಸಾಲಿನಲ್ಲಿ ರಾಜ್ಯದ 151 ಕೆರೆಗಳನ್ನು ಅಭಿವೃದ್ಧಿ ಪಡಿಸಲು ರೂ.413.75 ಲಕ್ಷಗಳನ್ನು ವಿನಿಯೋಗಿಸಲಾಗಿದೆ. ದಿನಾಂಕ: 10-05-2017ರ ಆದೇಶದ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಕ್ರ.ಸಂ. 1ರಲ್ಲಿ ಸದರಿ ಯೋಜನೆಯಡಿ ಸಹಾಯಧನವನ್ನು ಪಡೆಯಲು ಫಲಾನುಭವಿಯ (ವ್ಯಕ್ತಿ/ಸಂಘ) ಇಲಾಖಾ ವ್ಯಾಪ್ತಿಗೆ ಒಳಪಡುವ ಪೂರ್ಣಕಾಲಿಕ / ದೀರ್ಘಕಾಲಿಕ ಕೆರೆಯ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ಪಡೆದಿರತಕ್ಕದೆಂದು ಪ್ರಮುಖ ನಿಬಂಧನೆಯನ್ನು ವಿಧಿಸಲಾಗಿರುತ್ತದೆ. ಇದರಿಂದ ರಾಜ್ಯದಲ್ಲಿರುವ ಒಟ್ಟು 5.60 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣದ ಒಳನಾಡು ಜಲಸಂಪನ್ಮೂಲದಲ್ಲಿ 1.72 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣ ಪ್ರದೇಶವುಳ್ಳ 3799 ದೊಡ್ಡ ಇಲಾಖಾ ಕೆರೆಗಳನ್ನು ಮಾತ್ರ ಮೀನುಗಾರಿಕೆಗಾಗಿ ಅಭಿವೃದ್ಧಿ ಪಡಿಸಲು ಅವಕಾಶ ಇರುತ್ತದೆ. ಆದರೆ, ರಾಜ್ಯದಲ್ಲಿರುವ 1.21 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣ ಪ್ರದೇಶವುಳ್ಳ 22,624 ಗ್ರಾಮ ಪಂಚಾಯತ್ ಕೆರೆಗಳು ಹಾಗೂ 30000 ಸಣ್ಣ ಖಾಸಗಿ ಕೆರೆಗಳಿದ್ದು, ಅವುಗಳನ್ನು ಸದರಿ ಯೋಜನೆಯಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಅಳವಡಿಸಲು ಸದರಿ ಆದೇಶದ ಮೇಲ್ಕಂಡ ಪ್ರಮುಖ ನಿಬಂಧನೆಯಿಂದ ಅವಕಾಶವಿಲ್ಲದೆ ತೊಡಕುಂಟಾಗಿರುತ್ತದೆ. ರಾಜ್ಯದಲ್ಲಿರುವ ಗ್ರಾಮ ಪಂಚಾಯತ್ ಹಾಗೂ ಖಾಸಗಿ ಕೆರೆಗಳು ಪಂಚಾಯಿತಿ/ಖಾಸಗಿ ವ್ಯಕ್ತಿಗಳ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಈತಹ ಕೆರೆಗಳು ಅರೆ ತೀವ್ರ ಮೀನು ಕೃಷಿ ಕೈಗೊಳ್ಳಲು ಹೆಚ್ಚು ಸೂಕ್ತವಾಗಿರುತ್ತವೆ. ಆದುದರಿಂದ ಈ ಜಲಸಂಪನ್ಮೂಲಗಳಲ್ಲಿ "ಮತ್ಸ್ಯ ಕೃಷಿ ಆಶಾ ಕಿರಣ" ಕಾರ್ಯಕ್ರಮದಡಿ ಅತೀ ತೀವ್ರ ಮೀನು ಕೃಷಿ ಕೈಗೊಳ್ಳಲು ಪ್ರೋತ್ಸಾಹ ನೀಡಿದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆಯಲ್ಲದೇ, ಸಂಪನ್ಮೂಲಗಳ ಸದ್ಬಳಕೆಯಾಗಿ ಮೀನು ಕೃಷಿಕರ ಆದಾಯ ಗಣನೀಯವಾಗಿ ಹೆಚ್ಚಿಸಲು ಸಹಕಾರಿಯಾಗುತ್ತದೆ. ಇದಲ್ಲದೆ ಕ್ರ.ಸಂ. 2ರಲ್ಲಿ ಸಹಾಯಧನವನ್ನು ನೀಡುವ ಕಂತುಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿ ಕೆರೆಗಳ ಅಳವಡಿಕೆಯಿಂದ ಕ್ರ.ಸಂ.3 ಮತ್ತು 4ನೇ ಷರತ್ತುಗಳಲ್ಲಿ ಬೇಕಾದ ಬದಲಾವಣೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸುತ್ತಾ, 2018-19ನೇ ಸಾಲಿನ ಆಯವ್ಯಯದಲ್ಲಿ, ಸದರಿ ಯೋಜನೆಯಡಿ 741 ಹೆಕ್ಟೇರ್ ಪ್ರದೇಶವನ್ನು ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಅಳವಡಿಸಲು ರೂ.200.00 ಲಕ್ಷದ ಅನುದಾನವನ್ನು ಕಾಯ್ದಿರಿಸಲಾಗಿದೆ. ಆದ್ದರಿಂದ ರಾಜ್ಯದ ಇಲಾಖಾ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳನ್ನು ಸದರಿ ಯೋಜನೆಯಲ್ಲಿ 2018-19ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲು ಮೇಲೆ ಕ್ರಮ ಸಂಖ್ಯೆ (1)ರ ಆದೇಶದ ಅನುಬಂಧದಲ್ಲಿನ ಷರತ್ತು ಮತ್ತು ನಿಬಂಧನೆಗಳ ಪೈಕಿ ಅನುಬಂಧ-1 ರಲ್ಲಿ ನಮೂದಿಸಿರುವಂತೆ ತಿದ್ದುಪಡಿಗಳನ್ನು ಮಾಡಿ ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 77 ಮೀಇಯೋ 2018, ಬೆಂಗಳೂರು ದಿನಾಂಕ: 20-11-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2405-00-101-0-03 ರಡಿ ಒದಗಿಸಿರುವ ಅನುದಾನದ ಮಿತಿಯಲ್ಲಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ರೈತರು ಸ್ವಂತ ಜಮೀನುಗಳಲ್ಲಿ ನಿರ್ಮಿಸಿರುವ ಮೀನು ಕೃಷಿ ಕೊಳಗಳಲ್ಲಿ ಅರೆ ತೀವ್ರ ಮತ್ತು ತೀವ್ರ ಮೀನು ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿಸ್ತರಿಸಲು ಆದೇಶದ ಅನುಬಂಧದಲ್ಲಿ ನಮೂದಿಸಿರುವಂತೆ ಷರತ್ತು ಮತ್ತು ನಿಬಂಧನೆಗಳನ್ನು ಪರಿಷ್ಕರಿಸಿ ಆದೇಶಿಸಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ/32/ಪಿಎಫ್ಒ/2017, ದಿನಾಂಕ: 29-10-2018 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/593/ವೆಚ್ಚ-4/2018, ದಿನಾಂಕ: 22-09-2018 ರಲ್ಲಿ ನೀಡಿರುವ ಸಹಮತಿ-ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

20/11/18

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

TCK 20.11.18.

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

ಆದೇಶ ಸಂಖ್ಯೆ: ಪಸಂಮೀ 77 ಮೀಇಯೋ 2018, ಬೆಂಗಳೂರು ದಿನಾಂಕ: 20-11-2018 ರ

## ಅನುಬಂಧ

### "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯ ಸಹಾಯಧನ ಮಂಜೂರಾತಿಗಾಗಿ ಪಾಲಿಸಬೇಕಾದ

### ಷರತ್ತು ಮತ್ತು ನಿಬಂದನೆಗಳು

| ಕ್ರಮ ಸಂಖ್ಯೆ | ಪ್ರಸ್ತುತ ಷರತ್ತು ಮತ್ತು ನಿಬಂಧನೆಗಳು | ಪರಿಷ್ಕೃತ ಷರತ್ತು ಮತ್ತು ನಿಬಂಧನೆಗಳು |
|---|---|---|
| 1 | ಈ ಯೋಜನೆಯಡಿ ಸಹಾಯಧನ ಪಡೆಯಲು ಫಲಾನುಭವಿಯು (ವ್ಯಕ್ತಿ/ಸಂಘ) ಇಲಾಖಾ ವ್ಯಾಪ್ತಿಗೆ ಒಳಪಡುವ ಪೂರ್ಣಕಾಲಿಕ/ ದೀರ್ಘಕಾಲಿಕ ಕೆರೆಯ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ಪಡೆದಿರತಕ್ಕದ್ದು. ಕೆರೆಯು ವರ್ಷದ ಕನಿಷ್ಠ 8 ತಿಂಗಳುಗಳ ಕಾಲ 5 ಅಡಿಗಿಂತ ಹೆಚ್ಚು ನೀರಿನ ಮಟ್ಟ ಹೊಂದಿರಬೇಕು. ಜಲ ವಿಸ್ತೀರ್ಣದ ಶೇ.50ರಷ್ಟು ಭಾಗವನ್ನು ಉಪಯುಕ್ತ ಜಲವಿಸ್ತೀರ್ಣ ಎಂದು ಪರಿಗಣಿಸುವುದು. ಗರಿಷ್ಠ 50 ಹೆಕ್ಟೇರ್ ಉಪಯುಕ್ತ ಜಲ ವಿಸ್ತೀರ್ಣ ಹೊಂದಿರುವ ಕೆರೆಗಳನ್ನು ಆಯ್ಕೆ ಮಾಡಬಹುದಾಗಿದೆ. | ಈ ಯೋಜನೆಯಡಿ ಸಹಾಯಧನ ಪಡೆಯಲು ಫಲಾನುಭವಿಯು (ವ್ಯಕ್ತಿ/ಸಂಘ) ಇಲಾಖಾ ವ್ಯಾಪ್ತಿಗೆ/ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಪೂರ್ಣಕಾಲಿಕ/ ದೀರ್ಘಕಾಲಿಕ ಕೆರೆಯ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ಪಡೆದಿರತಕ್ಕದ್ದು. ಕನಿಷ್ಠ 6 ತಿಂಗಳುಗಳ ಕಾಲ 5 ಅಡಿಗಿಂತ ಹೆಚ್ಚು ನೀರಿನ ಮಟ್ಟ ಹೊಂದಿರಬೇಕು. ಜಲ ವಿಸ್ತೀರ್ಣದ ಶೇ.50ರಷ್ಟು ಭಾಗವನ್ನು ಉಪಯುಕ್ತ ಜಲವಿಸ್ತೀರ್ಣವುಳ್ಳ ಎಂದು ಪರಿಗಣಿಸುವುದು.<br><br>ಕನಿಷ್ಠ 4 ಹೆಕ್ಟೇರ್ ಮತ್ತು ಗರಿಷ್ಠ 50 ಹೆಕ್ಟೇರ್ ಉಪಯುಕ್ತ ಜಲ ವಿಸ್ತೀರ್ಣವುಳ್ಳ ಗ್ರಾಮ ಪಂಚಾಯತ್ ಹಾಗೂ ಇಲಾಖೆ ಕೆರೆಗಳು ಮತ್ತು ಖಾಸಗಿ ಕ್ಷೇತ್ರದ ಕನಿಷ್ಟ 0.5 ಎಕರೆ (0.2 ಹೆಕ್ಟೇರ್) ಜಲವಿಸ್ತೀರ್ಣ ಮೇಲ್ಪಟ್ಟ ಕೊಳಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆಯ್ಕೆ ಮಾಡಬಹುದು. |
| 2 | ಈ ಯೋಜನೆಯಡಿ ನೀಡುವ ಸಹಾಯಧನವು ಪ್ರತಿ ಹೆಕ್ಟೇರ್ ಉಪಯುಕ್ತಾ ಜಲವಿಸ್ತೀರ್ಣಕ್ಕೆ ಬಲಿತ ಬಿತ್ತನೆ ಮೀನುಮರಿಗಳಿಗೆ ರೂ.4000/- ಕೃತಕ (ಪೆಲೆಟೆಡ್) ಆಹಾರ ಖರೀದಿಗೆ ರೂ.50,000/- ಒಟ್ಟು ರೂ.54,000/- ಹೂಡಿಕೆ ವೆಚ್ಚ ಪರಿಗಣಿಸಿ ಅದರ ಶೇ.50 ರಷ್ಟು ಅಂದರೆ ರೂ.27,000/- ಪ್ರತಿ ಹೆ. ಉಪಯುಕ್ತಾ ಜಲವಿಸ್ತೀರ್ಣಕ್ಕೆ ಸಹಾಯಧನವನ್ನಾಗಿ 4 ಕಂತುಗಳಲ್ಲಿ ನೀಡತಕ್ಕದ್ದು. | ಈ ಯೋಜನೆಯಡಿ ನೀಡುವ ಸಹಾಯಧನವು ಪ್ರತಿ ಹೆಕ್ಟೇರ್ ಉಪಯುಕ್ತಾ ಜಲವಿಸ್ತೀರ್ಣಕ್ಕೆ ಬಲಿತ ಬಿತ್ತನೆ ಮೀನುಮರಿಗಳಿಗೆ ರೂ.4000/- ಕೃತಕ (ಪೆಲೆಟೆಡ್) ಆಹಾರ ಖರೀದಿಗೆ ರೂ.50,000/- ಒಟ್ಟು ರೂ.54,000/- ಹೂಡಿಕೆ ವೆಚ್ಚ ಪರಿಗಣಿಸಿ, ಸದರಿ ಮೊತ್ತದ ಶೇ.50 ರಷ್ಟು ಅಂದರೆ ರೂ.27,000/- ಪ್ರತಿ ಹೆ. ಉಪಯುಕ್ತಾ ಜಲವಿಸ್ತೀರ್ಣಕ್ಕೆ ಸಹಾಯಧನವನ್ನಾಗಿ 3 ಕಂತುಗಳಲ್ಲಿ ನೀಡತಕ್ಕದ್ದು. |

| | | |
|---|---|---|
| 3 | ಸದರಿ ಫಲಾನುಭವಿಯು ಸಹಾಯಧನ ಅರ್ಜಿ ಸಲ್ಲಿಸುವ ವರ್ಷದಲ್ಲಿ ಆ ವರ್ಷದ ಗುತ್ತಿಗೆ / ಬಿಡ್ ಮೊತ್ತವನ್ನು ಇಲಾಖೆಗೆ ಪಾವತಿಸತಕ್ಕದ್ದು. | ಸದರಿ ಫಲಾನುಭವಿಯು ಸಹಾಯಧನ ಅರ್ಜಿ ಸಲ್ಲಿಸುವ ವರ್ಷದಲ್ಲಿ ಆ ವರ್ಷದ ಗುತ್ತಿಗೆ / ಬಿಡ್ ಮೊತ್ತವನ್ನು ಇಲಾಖೆ / ಗ್ರಾಮ ಪಂಚಾಯತ್‌ಗೆ ಪಾವತಿಸತಕ್ಕದ್ದು. ಖಾಸಗಿ ವಲಯದ ಕೆರೆಗಳಿಗೆ ಗುತ್ತಿಗೆ ಮೊತ್ತದ ಪಾವತಿ ಅನ್ವಯಿಸುವುದಿಲ್ಲ. |
| 4 | ಗುತ್ತಿಗೆ ಅವಧಿಯು ಕನಿಷ್ಟ 2 ವರ್ಷಗಳು ಬಾಕಿಯಿರತಕ್ಕದ್ದು. | ಗುತ್ತಿಗೆ / ಟೆಂಡರ್-ಕಂ-ಹರಾಜು ಅವಧಿಯು ಕನಿಷ್ಟ 2 ವರ್ಷಗಳು ಬಾಕಿಯಿರತಕ್ಕದ್ದು. |

20/11/18

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

TC 20.11.18